**ಹೊಸದುರ್ಗದ ಹಿರಿಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹೊಸದುರ್ಗ**

**ಸಿ.ಸಿ.ನಂ.32/2019**

**ಪಿರ್ಯಾದುದಾರರು:-** **ವಿರುದ್ಧ** **ಆರೋಪಿತ ಃ-**

ಹೊಸದುರ್ಗ ಪೋಲೀಸ್,

**1.** ಕುಬೇರಪ್ಪ ತಂದೆ ಸಣ್ಣಪ್ಪ
ವಯಸ್ಸು 60 ವರ್ಷ,
ವಾಸಃ ನಾಗಯ್ಯನಹಟ್ಟಿ ಗ್ರಾಮ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

**ಪ್ರಶ್ನೆ 1)** ಪ್ರಕರಣದಲ್ಲಿ ನಡೆದ ಸಾಕ್ಷಿಗಳ ವಿಚಾರಣೆಯನ್ನು ಕೇಳೀದ್ದೀಯಾ?

ಉತ್ತರ :1 ನೇ ಆರೋಪಿ

ಪ್ರಶ್ನೆ **2):** ಫ್ರಾಸಾಃ **1** ಜಯಣ್ಣ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, 6 ವರ್ಷಗಳ ಹಿಂದೆ ತನ್ನ ಜಮೀನಿನಲ್ಲಿ ತಾನು ಬೇಸಾಯ ಮಾಡುತ್ತಿದ್ದು, ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ಬಂದು ಜಮೀನು ಯಾರಪ್ಪನದು ಎಂದು ಕೇಳಿದ್ದು, 1 ನೇ ಆರೋಪಿ ತನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, 1 ನೇ ಆರೋಪಿ ಕೋಲಿನಿಂದ ತನ್ನ ಬಲ ಮುಂಗೈಗೆ ಹೊಡೆದಿದ್ದು, 3 ನೇ ಆರೋಪಿ ಚಪ್ಪಲಿಯಿಂದ ತನ್ನ ಮುಖಕ್ಕೆ ಹೊಡೆದಿದ್ದು, 2 ನೇ ಆರೋಪಿ ಕೆಟ್ಟ ಮಾತುಗಳಿಂದ ಬೈದಿದ್ದು, ಗಲಾಟೆಯಾದ ನಂತರ ತಾನು ಜಿಲ್ಲಾಸ್ಪತ್ರೆಗೆ ಹೋಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ :1 ನೇ ಆರೋಪಿ

ಪ್ರಶ್ನೆ **3):** ಫ್ರಾಸಾಃ **1** ಜಯಣ್ಣ ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ನಂತರ ತಾನು ನ್ಯಾಯಾಲಯಕ್ಕೆ ಬಂದು ದೂರು ದಾಖಲಿಸಿದ್ದು, ಮೊದಲು ಪೋಲಿಸರಿಗೆ ದೂರು ನೀಡಿದ್ದು,ಅವರು ಯಾವುದೇ ಕ್ರಮ ಕೈ ಗೊಂಡಿರಲಿಲ್ಲ . ಗಲಾಟೆ ಆದ 5 ತಿಂಗಳ ನಂತರ ಪೋಲಿಸರು ತಮ್ಮ ಊರಿನ ತನ್ನ ಜಮೀನಿನೊಳಗಡೆ ಬಂದು ಮಹಜರ್ ಮಾಡಿದ್ದು, ಮಹಜರ್ ಸಮಯದಲ್ಲಿ ಚಾಸಾ.2 ಮತ್ತು ಚಾಸಾ.3 ಹಾಜರಿದ್ದು, ಗಲಾಟೆಯಾದ ಬಗ್ಗೆ ಪೋಲಿಸರಿಗೆ ಜಾಗ ತೋರಿಸಿದ್ದು, ಪೋಲಿಸರು ಸ್ಥಳದಿಂದ ಕಲ್ಲು, ದೋಣ್ಣೆ , ಕುಡುಗೋಲು ಮತ್ತು ಚಪ್ಪಲಿ ತೆಗೆದುಕೊಂಡಿದ್ದು, ಅದನ್ನು ಮು.ಮಾಲು 1 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ :1 ನೇ ಆರೋಪಿ

ಪ್ರಶ್ನೆ **4):** ಫ್ರಾಸಾಃ **2** ಕೃಷ್ಣಪ್ಪ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ಅವರು ಹೊಸದುರ್ಗ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದು, 10/09/2016 ರಂದು ಬೆಳಿಗ್ಗೆ 10.30 ಗಂಟೆಗೆ ತಾನು ಠಾಣಾಧೀಕಾರಿಯಾಗಿದ್ದಾಗ ಹೆಚ್.ಸಿ 1022 ಇವರು ನ್ಯಾಯಾಲಯದಿಂದ ಖಾಸಗಿ ದೂರನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 352/2016 ರಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಪ್ರ. ವ ವರದಿಯನ್ನು ತನ್ನ ಮೇಲಾಧಿಕಾರಿಗಳಿಗೂ ಮತ್ತು ಘನ ನ್ಯಾಯಾಲಯಕ್ಕೂ ಸಲ್ಲಿಸಿದ್ದು, ನಂತರ ದಿನಾಂಕ 11/09/2016 ರಂದು ಕೃತ್ಯ ನಡೆದ ಸ್ಥಳವಾದ ನಾಗಯ್ಯನಹಟ್ಟಿ ಗ್ರಾಮದ ಪಿರ್ಯಾಧಿಗೆ ಸೇರಿದ ಸರ್ವೇ ನಂ. 61/4 ರ ಜಮೀನಿಗೆ ಸ್ಥಳ ಮಹಜರ್ ಮಾಡಲು ಹೋಗಿದ್ದು, ಪಂಚರನ್ನಾಗಿ ಚಾಸಾ.2 ಮತ್ತು ಚಾಸಾ.3 ರವನ್ನು ಸ್ಥಳಕ್ಕೆ ಬರಮಾಡಿಕೊಂಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ :1 ನೇ ಆರೋಪಿ

ಪ್ರಶ್ನೆ **5):** ಫ್ರಾಸಾಃ **2** ಕೃಷ್ಣಪ್ಪ ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಚಾಸಾ.1 ಸ್ಥಳದಲ್ಲಿ ಹಾಜರಿದ್ದು, ಸ್ಥಳ ತೋರಿಸಿ ಕೃತ್ಯಕ್ಕೆ ಉಪಯೋಗಿಸಿದ ಕಲ್ಲನ್ನು ಹಾಜರುಪಡಿಸಿದ್ದು, ಕಲ್ಲನ್ನು ಅಮಾನತು ಪಡಿಸಿಕೊಂಡು ಚಾಸಾ.1 ರಿಂದ ಚಾಸಾ.3 ರವರ ಸಮಕ್ಷಮ ಪಂಚನಾಮೆ ಮತ್ತು ಕಚ್ಚಾ ನಕಾಶೆ ಜರುಗಿಸಿದ್ದು, ಸಾಕ್ಷಿ ಮುದ್ದೆ ಮಾಲು ನ್ನು ನೋಡಿ ಗುರುತಿಸಿದ್ದು, ಸ್ಥಳದಲ್ಲಿ ಪಿರ್ಯಾದಿಯ ಮರು ಹೇಳಿಕೆ ಮತ್ತು ಚಾಸಾ 2 ಮತ್ತು 3 ರವರ ಹೇಳಿಕೆ ಮಾಡಿಕೊಂಡಿದ್ದು, ನಿಪಿ.4 ರ ಸಮಯದಲ್ಲಿ ಅಮಾನತು ಪಡಿಸಿಕೊಂಡ ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆ 168/16 ಕ್ಕೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ಮುಂದಿನ ತನಿಖೆಯನ್ನು ಚಾಸಾ.6 ರವರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ :1 ನೇ ಆರೋಪಿ

ಪ್ರಶ್ನೆ **6):**ಫ್ರಾಸಾಃ **3** ಡಾ.ಸಾಲಿ ಮಂಜಪ್ಪ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ದಿನಾಂಕ 31/05/2016 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಜಯಣ್ಣ ತಂದೆ ಅಣ್ಣಪ್ಪ ಇವರು ಸ್ವತಃ ಆಸ್ಪತ್ರೆಗೆ ಬಂದಿದ್ದು, ಸದರಿ ವ್ಯಕ್ತಿಯು ದಿನಾಂಕ 31/05/2016 ರಂದು ಮಧ್ಯಾಹ್ನ 3.00 ಗಂಟೆಗೆ ಹೊಲದಲ್ಲಿ ಮಾರುತೇಶ್ ಮತ್ತು ಶಶಿ ಇವರಿಂದ ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು, ಇವರನ್ನು ಪರೀಕ್ಷಿಸಿದಾಗ ಗಾಯಗಳು ಕಂಡು ಬಂದಿದ್ದು, ಬಲ ಮುಂಗೈನಲ್ಲಿ ಊತ ಇದಿದ್ದು ಕಂಡು ಬಂದಿದ್ದು, ಎಕ್ಸ್ ರೇ ತೆಗೆಸಿ ಪರೀಕ್ಷಿಸಿದಾಗ ಮೂಳೆ ಮುರಿದಿದ್ದು, ಅದಕ್ಕೆ ಸಂಬಂಧಿಸಿದಂತೆ ತಾನು ಗಾಯದ ಪ್ರಮಾಣ ಪತ್ರ ವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ :1 ನೇ ಆರೋಪಿ

ಪ್ರಶ್ನೆ **7):** ಫ್ರಾಸಾಃ **4** ಗುರುಪ್ರಸಾದ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ಅವರು ಹೊಸದುರ್ಗ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ 20/10/2016 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ.5 ರಿಂದ ಪಡೆದು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿದ್ದು, ತಾನು ತನಿಖೆ ಪಡೆಯುವ ಪೂರ್ವದಲ್ಲಿ ದಿನಾಂಕ 11/09/2016 ರಂದು ಪಹಣಿಯನ್ನು ಸ್ವೀಕರಿಸಿ, ಅದನ್ನು ಚಾಸಾ.5 ರವರಿಗೆ ನೀಡಿದ್ದು, ದಿನಾಂಕ 10/01/2017 ರಂದು ಪಿರ್ಯಾಧಿಯ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿದ್ದು, ಅದೇ ದಿನ ಪಿರ್ಯಾಧಿಯ ಮರು ಹೇಳಿಕೆಯನ್ನು ಪಡೆದುಕೊಂಡಿದ್ದು, ತನಿಖೆ ಪೂರ್ಣ ಗೊಂಡಿದ್ದರಿಂದ ಆರೋಪಿಗಳ ವಿರುದ್ದ ಆರೋಪ ಸಾಭೀತಾದ ಕಾರಣ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಲು ಬಯಸುತ್ತೀರಾ?

ಉತ್ತರ :1 ನೇ ಆರೋಪಿ

**ಪ್ರಶ್ನೆ 8):** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವುದು ಇದೆಯೇ?
ಉತ್ತರ :1 ನೇ ಆರೋಪಿ

**ಪ್ರಶ್ನೆ 9)** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ?
ಉತ್ತರ :1 ನೇ ಆರೋಪಿ

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿರುವ ಉತ್ತರವನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ ಮತ್ತು ಅದು ಸರಿ ಇರುತ್ತದೆ ಅಂತ ಈ ಮೂಲಕ ದೃಢೀಕರಿಸುತ್ತೇನೆ)

**ಹೊಸದುರ್ಗ.** ಹಿರಿಯ **.ನ್ಯಾ.ದಂಡಾಧಿಕಾರಿಗಳು**
**ದಿಃ- 08.06.2023** **ಹೊಸದುರ್ಗ.**